# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:09-03-2016

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ:

ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಈಗಾಗಲೇ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳ ಬಗ್ಗೆ ದಿನಾಂಕ:22-02-2016 ರಂದು ನಡೆದ ಸಭೆಯ ನಡವಳಿಗಳು.

2) ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015, ದಿನಾಂಕ:09-03-2015.

3) ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015, ದಿನಾಂಕ:09-03-2015.

****

ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಈಗಾಗಲೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113 ರಂತೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡುವ ಬಗ್ಗೆ ಈ ಕೆಳಕಂಡಂತೆ ಕ್ರಮ ವಹಿಸಲು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

1. ದಿನಾಂಕ:10-01-1994 ರ ಆದೇಶದಲ್ಲಿ ಯಾವುದೇ ಗ್ರಾಮ ಪಂಚಾಯತಿಯ ವಾರ್ಷಿಕ ಆದಾಯ ರೂ. 30,000 ಕ್ಕಿಂತ ಕಡಿಮೆ ಇಲ್ಲದಿದ್ದರೆ ಅಂತಹ ಗ್ರಾಮ ಪಂಚಾಯತಿಗಳಿಗೆ ಹೆಚ್ಚುವರಿಯಾಗಿ ಒಂದು ಬಿಲ್‌ಕಲೆಕ್ಟರ್ ಹುದ್ದೆಗೆ ನೇಮಿಸಿಕೊಳ್ಳಬಹುದಾಗಿದ್ದು, ಅದರಂತೆ ಗ್ರಾಮ ಪಂಚಾಯತಿಗಳು ಬಿಲ್‌ಕಲೆಕ್ಟರ್‌ಗಳನ್ನು ನೇಮಿಸಿಕೊಂಡಿದ್ದು, ಈಗಾಗಲೇ 10 ವರ್ಷ ಸೇವೆ ಸಲ್ಲಿಸಿರುವ ಬಿಲ್‌ಕಲೆಕ್ಟರ್‌ಗಳಿಗೆ ಸಿಬ್ಬಂದಿ ವೆಚ್ಚ ಶೇ 40 ಕ್ಕೆ ಮೀರದಿರುವುದನ್ನು ಖಚಿತಪಡಿಸಿಕೊಂಡು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈಗಾಗಲೇ ಗ್ರಾಮ ಪಂಚಾಯತಿಯಿಂದ ವೇತನ ಪಡೆದಿರುವುದನ್ನು ಖಚಿತಪಡಿಸಿಕೊಂಡು, ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಅನುಮೋದನೆ ನೀಡುವುದು. ಹಾಗೂ ಗ್ರಾಮ ಪಂಚಾಯತಿಗಳು ಹೊಸದಾಗಿ ಯಾವುದೇ ಹೆಚ್ಚುವರಿ ಸಿಬ್ಬಂದಿಗಳನ್ನು ತೆಗೆದುಕೊಳ್ಳಬಾರದು.

2. ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ 10 ವರ್ಷಗಳಿಂದ ವಾಟರ್‌ಮೆನ್ / ಪಂಪ್ ಮೆಕಾನಿಕ್ / ಪಂಪ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ 3 ಸಿಸ್ಟೆನ್ ಕಿರು ಸರಬರಾಜು ಸ್ಥಾವರಗಳಿಗೆ ಒಬ್ಬ ವಾಟರ್‌ಮೆನ್ / ಪಂಪ್ ಮೆಕಾನಿಕ್ / ಪಂಪ್ ಆಪರೇಟರ್ ನೇಮಿಸಿಕೊಂಡಿದ್ದು, ಸಿಬ್ಬಂದಿ ವೆಚ್ಚ ಶೇ 40 ರ ಮಿತಿಯೊಳಗಿದ್ದಲ್ಲಿ ಮಾತ್ರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈಗಾಗಲೇ ಗ್ರಾಮ ಪಂಚಾಯತಿಯಿಂದ ವೇತನ ಪಡೆದಿರುವುದನ್ನು ಖಚಿತಪಡಿಸಿಕೊಂಡು, ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಅನುಮೋದನೆ ನೀಡುವುದು. ಹಾಗೂ ಗ್ರಾಮ ಪಂಚಾಯತಿಗಳು ಹೊಸದಾಗಿ ಯಾವುದೇ ಹೆಚ್ಚುವರಿ ಸಿಬ್ಬಂದಿಗಳನ್ನು ತೆಗೆದುಕೊಳ್ಳಬಾರದು.

3. ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ಸ್ವಚ್ಛತಾಗಾರರ ಹುದ್ದೆಗೆ ನೇಮಿಸಿಕೊಂಡಿದ್ದು, 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರೆ 5000 ಜನಸಂಖ್ಯೆಗೆ ಒಂದು ಸ್ವಚ್ಛತಾಗಾರ, 9000 ಜನಸಂಖ್ಯೆಗೆ ಇಬ್ಬರು ಸ್ವಚ್ಛತಾಗಾರ ಮತ್ತು 13000 ಜನಸಂಖ್ಯೆಗೆ ಮೂರು ಸ್ವಚ್ಛತಾಗಾರ ಹುದ್ದೆಗಳಿಗೆ ನೇಮಿಸಿಕೊಂಡಿದ್ದರೆ, ಸಿಬ್ಬಂದಿ ವೆಚ್ಚ ಶೇ 40 ರ ಮಿತಿಯೊಳಗಿದ್ದಲ್ಲಿ ಮಾತ್ರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈಗಾಗಲೇ ಗ್ರಾಮ ಪಂಚಾಯತಿಯಿಂದ ವೇತನ ಪಡೆದಿರುವುದನ್ನು ಖಚಿತಪಡಿಸಿಕೊಂಡು, ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಅನುಮೋದನೆ ನೀಡುವುದು. ಹಾಗೂ ಗ್ರಾಮ ಪಂಚಾಯತಿಗಳು ಹೊಸದಾಗಿ ಯಾವುದೇ ಹೆಚ್ಚುವರಿ ಸಿಬ್ಬಂದಿಗಳನ್ನು ತೆಗೆದುಕೊಳ್ಳಬಾರದು.

ತಮ್ಮ ವಿಶ್ವಾಸಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

1) ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು.
2) ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.